USN | | | | | | | | | | |

Question Paper Version : D

# First Semester B.E. Degree Examination, Jan./Feb. 2023

# ಸಾಂಸ್ಕೃತಿಕ ಕನ್ನಡ

## (COMMON TO ALL BRANCHES)

Time: 1 hrs.] [Max. Marks: 50

### ಸೂಚನೆಗಳು

1. ಎಲ್ಲ ೫೦ ಪ್ರಶ್ನೆಗಳಿಗೂ ಉತ್ತರಿಸಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ.
2. ಓ.ಎಂ.ಆರ್ ಉತ್ತರ ಪತ್ರಿಕೆಯಲ್ಲಿ ಯು.ಎಸ್.ಎನ್ ಸಂಖ್ಯೆ ಹಾಗೂ ಪಶ್ನೆ ಪತ್ರಿಕೆಯ ಶ್ರೇಣಿಯನ್ನು ಅಂದರೆ A, B, C ಅಥವಾ D ಯನ್ನು ತಪ್ಪಿಲ್ಲದಂತೆ ಕಡ್ಡಾಯವಾಗಿ ಗುರುತಿಸುವುದು ಅಭ್ಯರ್ಥಿಯ ಜವಾಬ್ದಾರಿಯಾಗಿರುತ್ತದೆ.
3. ಓ.ಎಂ.ಆರ್ ಉತ್ತರ ಪತ್ರಿಕೆಯಲ್ಲಿ ನಿಗದಿಪಡಿಸಿರುವ ಸ್ಥಳದಲ್ಲಿ ಭರ್ತಿಮಾಡದೆ ಹಾಗೆಯೇ ಬಿಟ್ಟಲ್ಲಿ ಅಥವಾ ಭರ್ತಿಮಾಡಿದ ಮಾಹಿತಿಯಲ್ಲಿ ಯಾವುದೇ ವ್ಯತ್ಯಾಸವಿದ್ದಲ್ಲಿ ಅಂತಹ ಉತ್ತರ ಪತ್ರಿಕೆಗಳನ್ನು ರದ್ದು ಪಡಿಸಲಾಗುವುದು.
4. ಕೇವಲ ಒಂದು ಉತ್ತರವನ್ನು ಮಾತ್ರ ಉತ್ತರ ಪತ್ರಿಕೆಯಲ್ಲಿ ಗುರುತಿಸತಕ್ಕದ್ದು. ಒಂದೆ ಪ್ರಶ್ನೆಗೆ ಎರಡು ಉತ್ತರವನ್ನು ಗುರುತಿಸುವುದು ಅಮಾನ್ಯ.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾದ ಓ.ಎಂ.ಆರ್ ಉತ್ತರ ಪತ್ರಿಕೆಯ ಹಾಳೆಯ ಮೇಲೆ ಕಪ್ಪು ಅಥವಾ ನೀಲಿ ಶಾಹಿಯ ಬಾಲ್‌ಪಾಯಿಂಟ್ ಪೆನ್ನಿನಿಂದ ಗುರುತು ಮಾಡಬೇಕು.

---

1. ತೇಲಾಡುವ ಮೇಘಗಳ ಮಧ್ಯೆ ಇರುವುದರಿಂದಲೇ ಇದಕ್ಕೆ ------- ಎಂಬ ಹೆಸರು ಬಂದಿದೆ.
   A) ಸಹ್ಯಾದ್ರಿ B) ಕುಣಬಿ C) ಪರ್ವತ D) ಮೆಗಾನೆ.

2. ಹಾಸನದ ಬಯಲು ಸೀಮೆಯಿಂದ ಅಕಸ್ಮಾತ್ತಾಗಿ ಮೆಗಾನೆ ಸೇರಿರುವವರು ---------.
   A) ಸೀತಮ್ಮ B) ಗೀತಮ್ಮ C) ಲಕ್ಷ್ಮಮ D)ಮಾರಮ್ಮ.

3. ಸಂಗೀತಪುರವು ಈ ಹಿಂದೆ ಯಾರ ಊರಾಗಿತ್ತು?
   A) ಕ್ರಿಸ್ತರು B) ಹಿಂದೂಗಳು C) ಜೈನರು D) ಕಾಡಿನ ಜನರ.

4. ಮನುಕುಲದ ಚರಿತ್ರೆಯಲ್ಲಿ ಮಹಿಳೆಯರ ಕೈಕಸುಬಾಗಿ ಆರಂಭವಾದ ಕಲೆಯೇ -------.
   A) ಉದ್ಯಮ B) ಗೃಹೋಪಯೋಗಿ C) ಕರಕುಶಲ ಕಲೆ D) ಕಲೆ.



VTU - 12-05-2023 01:34:28pm - SN - SN - SN

5. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಇದು -------- ದ ವಾಣಿ.

A) ಕಲಿಯುಗ B) ತ್ರೈತಾಯುಗ C) ನವಯುಗ D) ಶಿಲಾಯುಗ.

6. ಹೋಳಿ, ಸಿಗ್ಮಾನರ್ತನ, ಕೋಲಪದ, ಗಮಟೆ, ಪದಗಳ ರಸದೌತಣ ಇವು ಕುಣಬಿಯವರ ---------.

A) ಮಾತುಗಳು B) ಹಾಡುಗಳು C) ಆಭರಣಗಳು D) ನೃತ್ಯಗಳು.

7. ಬಟ್ಟೆಯ ಮೇಲಿನ ಮುದ್ರಣಕಲೆಗೆ ಮೂಲ ನೆಲೆಯಾದ ದೇಶ --------.

A) ಅಮೇರಿಕಾ B) ಆಫ್ರಿಕಾ C) ಭಾರತ D) ಇಂಗ್ಲೆಂಡ್.

8. ಸತ್ಯ ತನ್ನ ಸತ್ಯತೆಯಿಂದಲೇ ಪ್ರಭಾವಶಾಲಿಯಾಗಬಲ್ಲದೆಂಬುದು ವಿಶ್ವೇಶ್ವರಯ್ಯನವರ -------.

A) ಪ್ರೀತಿ B) ವಿಶ್ವಾಸ C) ಧರ್ಮ D) ನಂಬಿಕೆ.

9. "ದುಡಿದವನಿಗೆ ಪ್ರತಿಫಲ ದೊರೆಯಲೇಬೇಕು" ಎಂಬ ತತ್ವ --------.

A) ಗಾಂಧೀಜಿಯವರದು B) ನೆಹರುರವರದು

C) ವಿಶ್ವೇಶ್ವರಯ್ಯನವರದು D) ಕುವೆಂಪುರವರದು.

10. ಕನ್ನಡ ಸಂಸ್ಕೃತಿ ಈ ರೀತಿಯಾಗಿದೆ.

A) ಬಹುರೂಪಿಯಾಗಿದೆ. B) ವರ್ಣರಂಜಿತವಾಗಿದೆ

C) ಜೀವಂತವಾಗಿದೆ D) ಮೇಲಿನ ಎಲ್ಲವೂ.

11. 1800 ರಲ್ಲಿ ಬಳ್ಳಾರಿ ಜಿಲ್ಲೆಯ ಕಲೆಕ್ಟರ್ ಆಗಿದ್ದವರು----------.

A) ಡಿಸಿ B) ಪಂಡಿತ C) ಸರ್ ಥಾಮಸ್ ಮನ್ರೋ D) ಅಧಿಕಾರಿ.

12. ಕನ್ನಡ ಭಾಷೆಯನ್ನು ಲಿಪಿಗಳ ರಾಣಿ ಎಂದು ಕರೆದವರು ---------.

A) ಅಕ್ಕಮಹಾದೇವಿ B) ತ್ರಿವೇಣಿ C) ಜನಪದಸ್ತ್ರೀ D) ವಿನೋಭಾ ಭಾವೆ.

13. ಕನ್ನಡ ನಾಡಿನ ಜನತೆಯನ್ನು ವರ್ಣಿಸಿರುವ ಗ್ರಂಥ ----------.

A) ಗರಿ B) ಸಖಿಗೀತ C) ಕಗ್ಗ D) ಕವಿರಾಜಮಾರ್ಗ.



VTU-12-05-2023 01:18:02pm - SN - SN - SN - SN - SN
12-05-2023 01:34:28pm - SN - SN - SN - SN - SN

14. ವಿದ್ಯಾವರ್ಧಕ ಸಂಘವು ಎಲ್ಲಿ ಸ್ಥಾಪನೆಯಾಯಿತು?

A) ಧಾರವಾಡ B) ಹುಬ್ಬಳ್ಳಿ C) ಹರಿಹರ D) ದಾವಣಗೆರೆ.

15. ಜನಪದ ಸಾಹಿತ್ಯದ ಪ್ರಕಾರಗಳು -----------.

A) ಕವನ B) ಕಾದಂಬರಿ

C) ಹಾಡು, ಒಗಟು, ಒಡಪು, ಭಾವಗೀತೆ D) ಚಿತ್ರಗೀತೆ.

16. ನಗುವು ಸಹಜದ ಧರ್ಮ, ನಗೆಸುವುದು ------------.

A) ಧರ್ಮ B) ಅಧರ್ಮ C) ಹುಚ್ಚು D) ಪರಧರ್ಮ.

17. ವಸುಧೆಯೊಳ್ ಶಿಶುನಾಳಧೀಶನ ಮುಂದೆ ದ್ಯಾನದ ಮಗಿಯೊಂದು ಇಡುವಾಕಿ --------.

A) ಅಗಸಗಿತ್ತಿ B) ಕುಂಬಾರಕಿ C) ಬಳೆಗಾರ್ತಿ D) ಮುದುಕಿ.

18. ಹೊತ್ತು ಕಣಕಣದಿ ಮಣ್ಣನುಗೆದ್ದಲಿರುವೆಗಳು ಕಟ್ಟಿದಗೂಡಿಗೆ ಸೇರುವುದು ---------.

A) ಗಿಳಿ B) ಗೀಜಗ C) ಗುಬ್ಬಿ D) ಸರ್ಪ.

19. ಕೊಟ್ಟು ಕುದಿಯಲುಬೇಡ, ಇಟ್ಟು ಹಂಗಿಸಬೇಡ, ಎಷ್ಟುಂಡರೆಂದು ಅನಬೇಡ, ಈ ಮೂರು ಮುಟ್ಟಾವು -------- ಸದರೀಗಿ.

A) ಬ್ರಹ್ಮನ B) ವಿಷ್ಣುವಿನ C) ಮಹೇಶ್ವರನ D) ಶಿವನ

20. ತಲ್ಲಣಿಸದಿರು ಕಂಡ್ಯ ತಾಳು ಮನವೇ, ಕೀರ್ತನೆಯ ರಚನೆಕಾರರು -------.

A) ಶರಣರು B) ವಚನಕಾರರು C ) ಕನಕದಾಸರು D) ಪುರಂದರದಾಸರು.

21. ಕನ್ನಡಕ್ಕೆ ಅಪರೂಪದ ನಿಘಂಟನ್ನು ರಚಿಸಿಕೊಟ್ಟ ಜರ್ಮನ್ ದೇಶದ ಕವಿ --------.

A) ಕಿಟಲ್ B) ಅಂಟೋನಿ C) ಅಂಬಾನಿ D) ಮೆಕಾಲೆ.

22. ಭಾರತ ಸರ್ಕಾರವು ಕನ್ನಡ ಭಾಷೆಯನ್ನು ಏನೆಂದು ಘೋಷಿಸಿದೆ?

A) ಲಿಪಿ B) ಮಾತೃಭಾಷೆ C) ಆಡಳಿತ ಭಾಷೆ D) ಶಾಸ್ತ್ರೀಯ ಭಾಷೆ.

23. ಯುಗಾದಿ ಕಥೆಯಲ್ಲಿರುವ ಪ್ರಹ್ಲಾದ ------- ಇಂಜಿನಿಯರ್.

A) ಹಾರ್ಡ್‌ವೇರ್ ಇಂಜಿನಿಯರ್ B) ಸಿವಿಲ್ ಇಂಜಿನಿಯರ್

C) ಸಾಫ್ಟವೇರ್ ಇಂಜಿನಿಯರ್ D) ಮೆಕ್ಯಾನಿಕಲ್ ಇಂಜಿನಿಯರ್.



VTU-12-05-2023 01:18:02pm - SN - SN - SN - SN
12-05-2023 01:34:28pm - SN - SN - SN - SN

24. ಮೊದಲ ಬಾರಿ ಜೋಗ ಜಲಪಾತ ಕಂಡು ವಿಶ್ವೇಶ್ವರಯ್ಯ ಅವರು ಉದ್ಗರಿಸಿದ್ದು --------.

A) ಎಷ್ಟೊಂದು ಶಕ್ತಿ ಪೋಲಾಗುತ್ತಿದೆ. B) ಎಷ್ಟೊಂದು ಭೀಕರವಾಗಿದೆ.

C) ಎಷ್ಟೊಂದು ಗಲೀಜಾಗಿದೆ D) ಇದನ್ನು ನೋಡಿದ ನಾನೇ ಧನ್ಯ.

25. ಮಂಡ್ಯಜಿಲ್ಲೆಯ ಜನರಿಗೆ ಅನ್ನಬ್ರಹ್ಮನಾಗಿ ಅವತಾರ ಪುರುಷನಾಗೆ ಕಾಣಿಸಿಕೊಂಡವರು -------.

A) ಎ.ಎನ್. ಮೂರ್ತಿರಾವ್ B) ಸರ್. ಎಂ. ವಿಶ್ವೇಶ್ವರಯ್ಯ

C) ಕಂಬಾರ D) ಕುವೆಂಪು.

26. ಗೋಪಣ್ಣ ಮಾಸ್ತರರ ಆತ್ಮೀಯ ಗೆಳೆಯ---------

A) ಕಾಸಿಂಸಾಬರು B) ನರಸಿಂಹಮೂರ್ತಿ C) ಪ್ರಹ್ಲಾದ D) ಬ್ರಾಹ್ಮಣ.

27. ರಸಋಷಿ ಎಂದು ಕರೆಯಲ್ಪಡುವ ಕವಿ ------.

A) ಡಿವಿಜಿ B) ಕುವೆಂಪು C) ಜಿ.ಎಸ್. ಶಿವರುದ್ರಪ್ಪ D) ಗೋವಿಂದ ಪೈ.

28. ಕಬ್ಬಿಗರ ಕಾವ್ಯ ಕೃತಿಯನ್ನು ರಚಿಸಿದವರು ----------.

A) ಪಂಪ B) ಆಂಡಯ್ಯ C) ಹಲ್ಮಿಡಿ ಶಾಸನ D) ಕಾವ್ಯ.

29. ಕುಣಬಿ ಜನಾಂಗದವರು ಮೂಲತಃ ಯಾವ ರಾಜ್ಯದ ಹಿನ್ನಲೆ ಹೊಂದಿದ್ದಾರೆ.

A) ಮಧ್ಯಪ್ರದೇಶ B) ರಾಜಸ್ಥಾನ್ C) ಆಂಧ್ರಪ್ರದೇಶ D) ಗೋವಾ.

30. ಭಾರತದಲ್ಲಿ ಬಟ್ಟೆಗಳ ತಯಾರಿಕೆಗೆ ಬೇರೆ ಬೇರೆ ಬಣ್ಣಗಳನ್ನು ನೀಡುವ ಸುಮಾರು -----.

A) 300 B) 2500 C) 600 D) 200.

31. ಹುಲ್ಲಾಗು ಬೆಟ್ಟದಡಿ ಮನೆಗೆ ------- ಆಗು.

A) ಮಲ್ಲಿಗೆ B) ಅಬಲಿಗೆ C) ಜಾಜಿ D) ಸಂಪಿಗೆ.

32. ಸಿಂಹಾಸನಕೆ ಕೊನೆಗಾಲ ಬಂದಿರುವುದು ----------.

A) ಇಂದ್ರ B) ಕೌರವರು C) ರಾಮ D) ಮಂತ್ರಿ.

33. ಕನ್ನಡಕ್ಕೆ ಪ್ರಥಮ ಜ್ಞಾನಪೀಠ ಪ್ರಶಸ್ತಿ ತಂದು ಕೊಟ್ಟವರು ----------.

A) ಮಾಸ್ತಿ ವೆಂಕಟೇಶ ಅಯ್ಯಂಗಾರ B) ಶಿವರಾಮ ಕಾರಂತ

C) ಕುವೆಂಪು D) ಜಿ. ಎಸ್. ಶಿವರುದ್ರಪ್ಪ.



VTU-12-05-2023 01:18:02pm - SN - SN - SN 12-05-2023 01:34:28pm - SN - SN

34. ಧರ್ಮ ಸಹಿಷ್ಣತೆ ಬಗ್ಗೆ ಹೇಳುವ ಶಾಸನ ಇದಾಗಿದೆ --------.

A) ಶ್ರವಣಬೆಳಗೊಳದ ಶಾಸನ
B) ಹಲ್ಮಿಡಿಶಾಸನ
C) ಚಂದ್ರವಳ್ಳಿ ಶಾಸನ
D) ಬೇಲೂರು ಶಾಸನ.

35. ನವಿಲಿಗೆ ----------- ಬರೆದವರು ಯಾರು?

A) ಕಣ್ಣು B) ಕಿವಿ C) ರೆಕ್ಕೆ D) ಚಿತ್ರ.

36. -------- ಸಹಜಧರ್ಮ.

A) ಕೇಳುವುದು B) ಹೇಳುವುದು C) ಅಳುವುದು D) ನಗುವುದು

37. ಯಾವ ಆವಿಗೆಯನ್ನು ಕುಂಬಾರಕಿ ಮುಚ್ಚುವಳು ------- ?

A) ಗಡಗಿ B) ಆಚಾರ C) ಗುಣ D) ಭಕ್ತಿ.

38. ಕರ್ನಾಟಕ ಸಂಗೀತದ ಪಿತಾಮಹ ಯಾರು -------- ?

A) ಆಲೂರು ವೆಂಕಟರಾಯರು
B) ಕನಕದಾಸರು
C) ಪುರಂದರದಾಸರು
D) ಹರಿದಾಸರು.

39. ಯಾರ ಎಲುಬನ್ನು ಕಾಂಚಾಣ ಕಿರುಗೆಜ್ಜೆಯಾಗಿ ಮಾಡಿಕೊಂಡಿದೆ ------- ?

A) ಮಕ್ಕಳು B) ಮುದುಕರು C) ಹೆಂಗಸರು D) ಬಾಣಂತಿ.

40. ಹೊಸ ಚಿಗುರು -------- ಕೂಡಿರಲು ಮರಸೊಬಗು.

A) ಎಲೆ B) ಹಸಿರು C) ಕಾಂಡ D) ಹಳೇಬೇರು.

41. ಕುರುಡು ಕಾಂಚಾಣದ ಕುಣಿತ ಮಾಮೂಲು ಕುಣಿತವಲ್ಲ ಅದು ಎಲ್ಲಾ -------- ಯ ಮೊತ್ತ.

A ) ಆಕೃತಿ B) ಸ್ವೀಕೃತಿ C) ವಿಕೃತಿ D) ಸಂಪತ್ತು.

42. ಗೋಪಣ್ಣ ಮಾಸ್ತರರ ಮಗನ ಹೆಸರೇನು --------?

A) ಕರೀಂಖಾನ್ B) ಪ್ರಹ್ಲಾದ C) ರಾಮು D) ಶಿವಪ್ರಸಾದ.



VTU-12-05-2023 01:18:02pm - SN - SN - SN - SN
12-05-2023 01:34:28pm - SN - SN - SN - SN

43. ಕಾಸಿಂಸಾಬರ ಮಗಳ ಹೆಸರು ------.

A) ರುಕ್ಮಿಣಿ B) ರೇಖಾ C) ರಾಧಾ D) ಚಾಂದಿನಿ.

44. ಅಪಾರ್ಟಮೆಂಟಿನ ಜನರು ಗೋಪಣ್ಣ ಮಾಸ್ತರರನ್ನು ಕರೆದಿದ್ದು ಹೀಗೆ -------.

A) ತಾತ B) ಮಾಸ್ತರ C) ಓಲ್ಡ್ ಮ್ಯಾನ್ D) ಮುದುಕ.

45. ಕನಕದಾಸರ ಅಂಕಿತನಾಮ --------.

A) ಕನಕಪ್ಪ B) ದಾಸ

C) ತಿಮ್ಮಪ್ಪನಾಯಕ D) ಕಾಗಿನೆಲೆ ಆದಿಕೇಶವರಾಯ.

46. ಆರ್ಥಿಕವಾಗಿ ಹಾಗು ಸಾಮಾಜಿಕವಾಹಿ ಕೆಳಸ್ತರದಲ್ಲಿರುವ ವ್ಯಕ್ತಿಗಳು ಉಳಿಸಿಕೊಂಡು ಬಂದಿರುವ ಸಾಂಪ್ರದಾಯಿಕ ಮೌಲ್ಯಗಳ ತಿರುಳಾಗಿರುವ ಕತೆಯೇ, ಇದಾಗಿದೆ.

A) ಶರಪಂಜರ B) ಚೋಮನದುಡಿ C) ನಾಗರಹಾವು D) ಯುಗಾದಿ.

47. ಕಳವೆ ಪದದ ಅರ್ಥ-------.

A) ಚೀಲ B) ಭತ್ತ C) ರಾಗಿ D) ಜೋಳ.

48. ಸಮುದಾಯಕ್ಕಾಗಿ ಪ್ರಾಣತ್ಯಾಗ ಮಾಡುವ ಶೌರ್ಯದ ಸಂಕೇತಿಕವಾಗಿ ನಿಲ್ಲಿಸುವ ಕಲ್ಲೇ.

A) ಶಾಸನ B) ಗಡಿಕಲ್ಲು C) ಶಿಲಾಶಾಸನ D) ವೀರಗಲ್ಲು.

49. ಕುರುಡ ಕಣ್ಣು ಕಾಣಲರಿಯದೆ ------- ಬಯ್ದುದು.

A) ಕಿವಿ B) ಕಣ್ಣು C) ಕನ್ನಡಿ D) ದೇವರು.

50. ಕೂಲಿ ಕಂಬಳಿಯವರ ಪಾಲಿನ ಮೈದೊಗಲ ಧೂಳಿಯ ------- ಹಣೆಯೊಳಗಿತ್ತೊ.

A) ಕುಂಕುಮ B) ಭಂಡಾರ C) ಅಂಗಾರ D) ಶ್ರಮ.

* * * * *

VTU 12-05-2023 01:18:02pm - SN - SN - SN - SN - SN
12-05-2023 01:34:28pm - SN - SN - SN - SN - SN - SN - SN - SN - SN